‘ನಾನು ಶತ್ರುವಿನೊಂದಿಗೆ ಕೂತು ಊಟ ಮಾಡುವುದಿಲ್ಲ. ನಿನ್ನೊಂದಿಗೆ ಹೋರಾಡುತ್ತೇನೆ’ ಎಂದ ಎರಡನೆಯ ಅಣ್ಣ.

ಡ್ರಾಗನ್ ತಕ್ಷಣ ತನ್ನ ಸೊಂಟದಲ್ಲಿದ್ದ ಕತ್ತಿಗೆ ಆದೇಶಿಸಿದ– ‘ಸಾವಿನ ಕತ್ತಿಯೇ, ನೀನು ಕವಚದಿಂದ ಹೊರಬಂದು ಈ ಹುಡುಗನ ಕಾಲುಗಳನ್ನು ಕತ್ತರಿಸು!’

ಕತ್ತಿ ಹೊರಬಂದು ಕೂಡಲೇ ಅವನ ಕಾಲುಗಳನ್ನು ಕತ್ತರಿಸಿತು. ಡ್ರಾಗನ್ ಅವನನ್ನು ಮತ್ತು ಅವನ ಕತ್ತರಿಸಿದ ಕಾಲುಗಳನ್ನು ಅದೇ ಆಳದ ಹೊಂಡಕ್ಕೆ ಎಸೆದ.

ಇಬ್ಬರು ಸಹೋದರರನ್ನು ಕಳೆದುಕೊಂಡ ತಂಗಿಯ ದುಃಖಕ್ಕೆ ಕೊನೆಯೇ ಇರಲಿಲ್ಲ. ನಿತ್ಯ ಅವಳು ತನ್ನ ಊಟದಲ್ಲಿ ಸ್ವಲ್ಪ ಊಟವನ್ನು ಉಳಿಸಿ ಅದನ್ನು ಡ್ರಾಗನ್‌ಗೆ ತಿಳಿಯದಂತೆ ಆ ಹೊಂಡಕ್ಕೆ ಹಾಕಿ ಬರುತ್ತಿದ್ದಳು.

ಇತ್ತ ಅವರ ತಾಯಿ ಅನೇಕ ದಿನಗಳು ಕಳೆದರೂ ಇಬ್ಬರು ಮಕ್ಕಳೂ ಬರದಿದ್ದನ್ನು ಕಂಡು ಅತೀವ ದುಃಖಿಗೊಂಡಳು. ಕಡೆಗೆ ಅವಳು ಅವರನ್ನು ಹುಡುಕಲು ಹೊರಟಳು. ಒಂದು ದಿನ ಅವಳು ಬಾವಿಯ ಬಳಿಯಲ್ಲಿ ನಿಂತು ನೀರು ಕುಡಿದು, ಅಲ್ಲಿಯೇ ಇದ್ದ ಕಲ್ಲಿನ ಮೇಲೆ ಕೂತಳು. ಆಗ ಅವಳಿಗೆ ತಾನು ತಾಯಿಯಾಗುತ್ತೇನೆಂದು ಅನ್ನಿಸಿತು. ಕೆಲವೇ ದಿನಗಳಲ್ಲಿ ಅವಳು ಇನ್ನೊಂದು ಗಂಡು ಮಗುವಿಗೆ ಜನ್ಮ ನೀಡಿದಳು. ಆ ಮಗು ಹುಟ್ಟಿದ ಕೂಡಲೇ ವೇಗವಾಗಿ ಬೆಳೆಯಲಾರಂಭಿಸಿತು. ಅವನು ಎಷ್ಟು ದೊಡ್ಡವನಾಗಿ ಬೆಳೆದನೆಂದರೆ, ಅವನು ತನ್ನ ಹನ್ನೆರಡನೆಯ ದಿನಕ್ಕೆ ಹನ್ನೆರಡು ವರ್ಷದ ಬಾಲಕನಷ್ಟು ದೊಡ್ಡವನಾದ! ಅವನು ಆಗ ಬಲಶಾಲಿಯೂ ಆಗಿದ್ದ.

ಒಂದು ದಿನ ಅವನು, ‘ಇವನು ಮನಸ್ಸು ಮಾಡಿದರೆ ತನ್ನ ಇಬ್ಬರು ಸಹೋದರರು ಮತ್ತು ತಂಗಿಯನ್ನು ಮರಳಿ ತರಬಲ್ಲ’ ಎಂದು ಯಾರೋ ಹೇಳುವುದನ್ನು ಕೇಳಿದ. ತನ್ನ ಇಬ್ಬರು ಸಹೋದರರು ಮತ್ತು ತಂಗಿಯ ಬಗ್ಗೆ ತಾಯಿಯನ್ನು ಕೇಳಿದಾಗ ಅವಳು, ‘ನಿನಗೆ ಸಹೋದರರು  ಮತ್ತು ತಂಗಿ ಇರಲೇ ಇಲ್ಲ’ ಎಂದು ಹೇಳಿದಳು. ಅವಳು ತನ್ನ ಈ ಮಗನನ್ನೂ ಕಳೆದುಕೊಳ್ಳಲು ಬಯಸದೇ ಸುಳ್ಳು ಹೇಳಿದ್ದಳು.

ಒಂದು ದಿನ ಈ ಬಲಶಾಲಿ ಮಗ ಒಂದು ವಿಶಾಲ ಬಂಡೆಯನ್ನು ಸೀಳಿ ಗದೆಯೊಂದನ್ನು ಮಾಡಿಸಿಕೊಂಡ. ನಂತರ ಮನೆಗೆ ಬಂದು ತಾಯಿಗೆ ಹೇಳಿದ, ‘ಅಮ್ಮ ನಾನು ನಿದ್ರೆ ಮಾಡಲು ಹೋಗುತ್ತೇನೆ. ನಿನಗೆ ಗದೆಯ ಶಬ್ದ ಕೇಳಿಸಿದಾಗ, ನನ್ನನ್ನು ಎಚ್ಚರಿಸು.’

ಬಲಶಾಲಿ ಬಾಲಕ ಮೂರು ಹಗಲು, ಮೂರು ರಾತ್ರಿ ನಿದ್ರಿಸಿದ. ನಾಲ್ಕನೆಯ ದಿನ ಆಕಾಶದಲ್ಲಿ ಶಬ್ದ ಕೇಳಿಸಿತು. ತಾಯಿ ಮಗನನ್ನು ಎಚ್ಚರಿಸಿದಳು.

ನಂತರ ಬಾಲಕ ತನ್ನ ತಾಯಿಯ ಬಳಿಗೆ ಬಂದು ಹೇಳಿದ, ‘‘ಅಮ್ಮಾ, ನನ್ನ ಕನಸಿನಲ್ಲಿ ಒಬ್ಬ ವೃದ್ಧ ಬಂದು, ‘ನೀನು ನಿನ್ನ ಮನೆಯ ನೆಲಮಾಳಿಗೆಯಿಂದ ಹೊರಬಂದು ನನಗೆ ಕೇಕ್ ಕೊಟ್ಟರೆ ನಿನ್ನ ಶಕ್ತಿಯನ್ನು ಮೂರು ಪಟ್ಟು ಮಾಡುವೆ’ ಎಂದ’’

ತಾಯಿ ಕೇಕ್ ಮಾಡಲು ನೆಲಮಾಳಿಗೆಗೆ ಹೋದಾಗ, ಬಲಶಾಲಿ ಬಾಲಕ ಮನೆಯನ್ನೇ ಕೆಳಗೆ ತಳ್ಳಲು ಪ್ರಾರಂಭಿಸಿದ. ತಾಯಿಗೆ ಉಸಿರುಗಟ್ಟಿದಂತಾಯಿತು.

‘ಅಮ್ಮಾ, ನಿಜ ಹೇಳು, ನನಗೆ ಇಬ್ಬರು ಸಹೋದರರು ಮತ್ತು ಒಬ್ಬ ತಂಗಿ ಇದ್ದಳಂತೆ, ಹೌದಾ?’

ಆಗ ತಾಯಿ ಹೊರಬಂದು ನಿಜ ಸಂಗತಿಯನ್ನು ಹೇಳಿದಳು.

‘ಅಮ್ಮಾ, ನೀನು ನಿನ್ನ ಕಣ್ಣೀರಿನಿಂದ ಹಿಟ್ಟನ್ನು ಕಲೆಸಿ ಕೇಕ್ ತಯಾರಿಸು. ನಾನು ಕೇಕ್‌ನೊಂದಿಗೆ ಹೋಗಿ ಅವರನ್ನೆಲ್ಲಾ ಹುಡುಕಿ ಕರೆತರುವೆ’ ಎಂದ ಬಲಶಾಲಿ ಬಾಲಕ.

(ಮುಂದುವರಿಯುವುದು)

**ಆಧಾರ: ಡಿ.ಎನ್. ಶ್ರೀನಾಥ್**

# ಇಳಿದು ಬಾ ಆಡೋಣ

ಮರದಲಿ ಕುಳಿತಿಹ
ಸುಂದರ ಹಕ್ಕಿಯೇ
ಇಳಿದು ಬಾ ಆಡೋಣ

ಹಚ್ಚನೆ ಹಸಿರಿನ
ಕಾಡನು ಸುತ್ತುತ
ಬೇಸರವನ್ನು ನೀಗೋಣ

ನಿನ್ನಯ ರೆಕ್ಕೆ
ನನಗೂ ಹಚ್ಚು
ಮೇಲಕೆ ಹಾರೋಣ

ಬಾನಲಿ ತೇಲುತ
ಮೋಡವ ನೋಡುತ
ಚಿಂತೆಯ ಅಳಿಸೋಣ

ನೀರಿನ ಬವಣೆಯ
ವರುಣಗೆ ತಿಳಿಸುತ
ಮಳೆಯನು ಕರೆಯೋಣ

ಮಿನುಗುವ ತಾರೆ
ಸೂರ್ಯ ಚಂದ್ರರ
ಸ್ನೇಹವ ಮಾಡೋಣ

ದೇಶ ವಿದೇಶವ
ತಿರುಗುತ ನಾವು
ಮೈತ್ರಿಯ ಗಳಿಸೋಣ

ಭಾರತ ಮಾತೆಯ
ಧ್ವಜವನು ನಾವು
ಎಲ್ಲೆಡೆ ಮೆರೆಸೋಣ

**–ಬಿ.ಎಸ್. ಜಗಾಪುರ,**
**ಬೆಳಗಾವಿ**

